OKA-202

**ದ್ವಿತೀಯ ಬಿ.ಎ. ತೆರೆದ ಪುಸ್ತಕ ಪರೀಕ್ಷೆ ಸೆಪ್ಟೆಂಬರ್/ಅಕ್ಟೋಬರ್– 2020**

**(ಹೊಸ ಪಠ್ಯಕ್ರಮ– SLM Scheme)**

**ಐಚ್ಛಿಕ ಕನ್ನಡ : ಪತ್ರಿಕೆ–2**

**(ಬಸವರಾಜದೇವರ ರಗಳೆ, ಹರಿಶ್ಚಂದ್ರಕಾವ್ಯ ಸಂಗ್ರಹ, ಕೆ.ಎಸ್.ನ ಅವರ ಆಯ್ದ ಕವನಗಳು, ಬೆರಳ್‌ಗೆ ಕೊರಳ್)**

**ಸಮಯ :** **ಗರಿಷ್ಠಾಂಕ : 80**

**ಸೂಚನೆ : ಎಲ್ಲಾ ಪ್ರಧಾನ ಪ್ರಶ್ನೆಗಳು ಕಡ್ಡಾಯ**

**ಎ – ವಿಭಾಗ (20 ಅಂಕಗಳು)**

**(ಬಸವರಾಜದೇವರ ರಗಳೆ, ಹರಿಶ್ಚಂದ್ರಕಾವ್ಯ ಸಂಗ್ರಹ : 20 ಅಂಕಗಳು)**

**1.** ಎರಡರ ಭಾವವನ್ನು ಸಂದರ್ಭಸಹಿತ ವಿವರಿಸಿ : **2 X 4 = 8**

1. ಧೂಪ ಧೂಮದ ತಿರುಳ ಪರಿಮಳವನೊಲಿದಿತ್ತು
ದೀಪದೊಳು ಕಂಬೆಳಗನೆತ್ತಿ ಸುಖಮಂ ಹೊತ್ತು
ರನ್ನದಡ್ಡಣಿಗೆಗಳ ಮೇಲೆ ಬೆಳಗಂ ಕರೆವ
ಹೊನ್ನ ಪರಿಯಾಣದೊಳಗಮೃತಾನ್ನಮಂ ಮೆರೆವ
ನವಘೃತಂ ನವಶಾಕ ಪಾಕಂಗಳಂ ಬಡಿಸಿ
ನವಮಧುರ ರಸವೊಸರ್ವ ಪಕ್ವಾನ್ನಮಂ ಬಡಿಸಿ.

ಅಥವಾ

ಜಂಗಮ ಸಮಾಧಿ ತನಗೆಂಬಂತೆ ಕಣ್‌ಮುಚ್ಚಿ
ಲಿಂಗಿದಂಘ್ರಿಯ ಸೋಂಕಲಂಗುಲಿ ಕರಂ ನಚ್ಚಿ!
ಉಸಿರಲ್ಲಿ ಶರಣಾರ್ಥಿಎಂದೆಂದು ಸುಳಿವುತಿರೆ
ಅಸುವಿನೊಳು ಸಂಗನು ಶರಣರುಂ ನೆಲೆಸುತಿರೆ
ನಿದ್ರೆಯೊಳಗಿರ್ದನು.......

2. ಹಾಡನೊಲಿದಾಲಿಸಿದ ಕಿವಿಗೆ ಹೊಲೆಯಿಲ್ಲ ಮಾ
ತಾಡಿ ಹೊಗಳಿದ ಬಾಯ್ಗೆ ಹೊಲೆಯಿಲ್ಲ ರೂಪ ನೆಱೆ
ನೋಡಿದ ವಿಲೋಚನಕೆ ಹೊಲೆಯಿಲ್ಲ ಮೆಯ್‌ಮುಡಿಗಳಿಂ ಸುಳಿವ ತಂಗಾಳಿಯಿಂ
ತೀಡುವ ಸುಗಂಧಮಂ ವಾಸಿಸಿದ ನಾಸಿಕಕೆ
ನಡೆ ಹೊಲೆಯಿಲ್ಲ ಸೋಂಕಿಂಗೆ ಹೊಲೆಯುಂಟಾಯ್ತೆ
ಕೂಡಿರ್ದ ಪಂಚೇಂದ್ರಿಯಂಗಳೊಳು ನಾಲ್ಕಧಮವೊಂದಧಿಕವೇ

ಅಥವಾ

ಕೊಟ್ಟವಧಿಯಂ ನೆನೆದು ನೋಡಿ ಹವ್ವನೆ ಹಾಜಿ
ಮುಟ್ಟಿಬಂದುದು ದಿನಂ ಕೈಕೊಂಡ ತೆಱದವಂ
ಕಟ್ಟುಗ್ರನಭ್ಯಾಸದವರಿಲ್ಲ ಬಾಚಲಡಪಿಲ್ಲ ನಾಂ ಕುಲಧರ್ಮವ
ಬಿಟ್ಟು ತಿರಿವವನಲ್ಲವೋಲೈಸಿ ನೆಜೆ ಲಜ್ಜೆ
ಗೆಟ್ಟು ಬೇಡುವಡಿಲ್ಲಿ ದೊರೆಯಿಲ್ಲ ಕೃಷಿಯಿಂದ
ಹುಟ್ಟಿಸುವೆನೆಂಬಡೆಡೆಯಿಲ್ಲವಿನ್ನೇಗೆಯ್ವೆನೆಂದು ಮಱುಗಿದನರಸನು.

2. **ಎಂಟು** ಪದಗಳಿಗೆ ಅರ್ಥ ಬರೆಯಿರಿ : **8 X ½= 4**

ಇಳೆ, ಮುಳಿ, ಮುಕುರ, ಹದುಳ, ಶೀತೋದಕ, ಮೇಖಲೆ, ಹಗ್ಗಿ, ಬೀ, ಹೊಣಕೆ, ಪರ್ವು

3. **ಒಂದು** ವಿಷಯವನ್ನುಕುರಿತುಟಿಪ್ಪಣಿ ಬರೆಯಿರಿ : **1 X 4 = 4**

3.1 ವೃಷಭದೇವ

3.2 ಚಂದ್ರಮತಿ

4. **ಎರಡರ** ಸಂದರ್ಭ ಸ್ವಾರಸ್ಯವನ್ನು ವಿವರಿಸಿ : **2 X 2 = 4**

4.1 ಭಕ್ತರ್ ಕೊಟ್ಟೊಡೆ ಕೈಕೊಳ್ವಂ

ಅಥವಾ

ನಿನ್ನ ನೇಮವಿದಾರ್ಗುಂಟು

4.2 ಹೆತ್ತತಾಯಂ ಮಾರಿ ತೊತ್ತಕೊಂಬರೆ

ಅಥವಾ

ಕಡೆಗೆ ಮೆಣಸು ಹುಳಿತಡೆ ಜೊಳದಿಂ ಕುಂದೆ

## ಬಿ – ವಿಭಾಗ

## (ಬಸವರಾಜದೇವರ ರಗಳೆ, ಹರಿಶ್ಚಂದ್ರಕಾವ್ಯ ಸಂಗ್ರಹ : 30 ಅಂಕಗಳು)

5. **ಒಂದು** ಪ್ರಶ್ನೆಗೆಉತ್ತರಿಸಿ : **1 X10 = 10**

5.1 ಬಸವರಾಜ ದೇವರ ರಗಳೆಯಲ್ಲಿ ಬರುವ ಪವಾಡಗಳು ಯಾವುವು? ಅವುಗಳಲ್ಲಿ ವ್ಯಕ್ತವಾಗುವ ಆಶಯವೇನು?

5.2 ಕೇದಗೆಯ ಹೂವಿನ ಪ್ರಸಂಗದ ಸ್ವಾರಸ್ಯ ಮತ್ತು ಮಹತ್ವವನ್ನು ವಿವರಿಸಿ.

6. **ಒಂದು** ಪ್ರಶ್ನೆಗೆಉತ್ತರಿಸಿ : **1 X10= 10**

6.1 ರಾಜ್ಯ ಸರ್ಮಪಣ ಸಂದರ್ಭದ ಹೃದಯಸ್ಪರ್ಶಿ ಸನ್ನಿವೇಶ ಹರಿಶ್ಚಂದ್ರ ಕಾವ್ಯದಲ್ಲಿ ಮೂಡಿಬಂದಿರುವ ಬಗೆಯನ್ನು ವಿವರಿಸಿ.

6.2 ವಿಶ್ವಾಮಿತ್ರ– ವಶಿಷ್ಠರ ಮಾತಿನ ಘರ್ಷಣೆಗೆ ಹರಿಶ್ಚಂದ್ರ ಬಲಿಯಾಗುವ ಪ್ರಸಂಗವನ್ನು ತಿಳಿಸಿ.

7. **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **2 X5= 10**

7.1 ಶರಣರ ವೈಭವ

ಅಥವಾ

ಬಸವಣ್ಣನವರ ವಚನಗಳ ಆಶಯ

7.2 ಗಾನರಾಣಿಯರ ಪ್ರಸಂಗ

ಅಥವಾ

ಚಂದ್ರಮತಿಯ ವಿಲಾಪ

**ಸಿ – ವಿಭಾಗ**

**(ಕೆ.ಎಸ್.ನ ಅವರಆಯ್ದ ಕವನಗಳು, ಬೆರಳ್‌ಗೆ ಕೊರಳ್ : 30 ಅಂಕಗಳು)**

8. ಒಂದು ಪ್ರಶ್ನೆಗೆಉತ್ತರಿಸಿ : **1X10= 10**

8.1 'ಬಳೆಗಾರನ ಹಾಡು' ಕವಿತೆಯಲ್ಲಿ ಕಾಣಸಿಗುವ ಭಾವನಾತ್ಮಕ ಸಂಬಂಧವನ್ನು ವಿವರಿಸಿ.

8.2 ಚರಿತ್ರೆಯನ್ನು ಕುರಿತು ಕವಿಯ ಅಭಿಪ್ರಾಯವೇನು? ತಿಳಿಸಿ.

9. ಒಂದು ವಿಷಯವನ್ನು ಕುರಿತು ಟಿಪ್ಪಣಿ ಬರೆಯಿರಿ : **1 X 5= 5**

9.1 ಗಂಡನ ಮನೆಗೆ ಬಂದ ಹೆಣ್ಣಿನ ಮನಃಸ್ಥಿತಿ

9.2 ರೈಲ್ವೆ–ನಿಲ್ದಾಣದಲ್ಲಿ ತಾಯಿ–ಮಗಳ ಸಂಭಾಷಣೆಯ ಸ್ವಾರಸ್ಯ

10. ಒಂದು ಪ್ರಶ್ನೆಗೆ ಉತ್ತರಿಸಿ : **1X10= 10**

10.1 ಅಬ್ಬೆ ಪಾತ್ರದ ವೈಶಿಷ್ಟ್ಯವನ್ನು ನಾಟಕದ ಹಿನ್ನೆಲೆಯಲ್ಲಿ ವಿವರಿಸಿ.

10.2 ದ್ರೋಣರ ಮಾನಸಿಕ ತೊಳಲಾಟಕ್ಕೆ ಕಾರಣವೇನು? ಪರಿಣಾಮವೇನು?

11. ಒಂದು ವಿಷಯವನ್ನು ಕುರಿತು ಟಿಪ್ಪಣಿ ಬರೆಯಿರಿ : **1X5= 5**

11.1 ಏಕಲವ್ಯ

11.2 ಅರ್ಜುನ

*******